ಪ್ರವಾಹ ನಿರ್ವಹಣೆ ಮತ್ತು ಪುನರ್ ವಸತಿ

160 (1045) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಕರ್ನಾಟಕದಲ್ಲಿ ಪ್ರವಾಹಪೀಡಿತ ಪ್ರದೇಶಗಳ ಪೈಕಿ ಕೊಡಗು ಜಿಲ್ಲೆಯ ಹೆಚ್ಚು ಬಾದಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹೌದಾದರೆ ಸರ್ಕಾರ ಕೈಗೊಂಡಿರುವ ಮತ್ತು ಪುನರ್ವಸತಿ ಪರಿಹಾರ ಕಾರ್ಯಗಳ ವಿವರಗಳನ್ನು ನೀಡುವುದು

ಇ) ಪ್ರವಾಹಪೀಡಿತವಾಗಿರುವ ಸ್ಥಳಗಳು ಮತ್ತು ಜನರ ಸಂಖ್ಯೆ ನೀಡುವುದು

ಈ) ಪೀಡಿತ ಪ್ರದೇಶಗಳಲ್ಲಿ ಪರಿಹಾರಕ್ಕೆ ಬಿಡುಗಡೆ ಮಾಡಿದ ಅನುದಾನ ಅಧವಾ ಬಿಡುಗಡೆ ಮಾಡಬೇಕಾದ ಅನುದಾನ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಹೌದು

ಆ) ಕೊಡಗು ಜಿಲ್ಲೆಯಲ್ಲಿ ಪರಿಹಾರ ಕಾರ್ಯ ಕೈಗೊಳಲು ಸರ್ಕಾರವು ರೂ 650 00 ಲಕ್ಷ ಹಣ ಬಿಡುಗಡೆ ಮಾಡಿದೆ ಜಿಲ್ಲಾ ಆಡಳಿತವು ತುರ್ತು ಪರಿಹಾರ ಕಾರ್ಯ ಕೈಗೊಳ್ಳಲು ವಿರಾಜಪೇಟೆ ತಹಶೀಲ್ದಾರ್ ರವರಿಗೆ ರೂ 20 00 ಲಕ್ಷ ಸೋಮವಾರಪೇಟೆ ತಹಶೀಲ್ದಾರ್ ರವರಿಗೆ ರೂ 10 00 ಲಕ್ಷ ಮತ್ತು ಮಡಿಕೇರಿ ತಹಶೀಲ್ದಾರ್ ರವರಿಗೆ ರೂ 10 00 ಲಕ್ಷ ಅನುದಾನ ಬಿಡುಗಡೆ ಮಾಡಿರುತ್ತದೆ ಕುಡಿಯುವ ನೀರಿಗೆ ರೂ 50 00 ಲಕ್ಷ ಬಿಡುಗಡೆ ಮಾಡಿರುತ್ತದೆ ತಗ್ಗು ಪ್ರದೇಶಗಳಲ್ಲಿರುವ ಜನರನ್ನು ಸ್ಥಳಾಂತರಿಸಲಾಗುತ್ತದೆ 10 ಗಂಜಿ/ಪುನರ್ವಸತಿ ಕೇಂದ್ರಗಳನ್ನು ತೆರೆದು ಜನರಿಗೆ ಊಟ ವಸತಿ ಒದಗಿಸಲಾಗಿದೆ ಮುಂಜಾಗ್ರತೆ ಕ್ರಮವಾಗಿ ದೋಣಿಗಳನ್ನು ವ್ಯವಸ್ಥೆ ಮಾಡಲಾಗಿದೆ ತುರ್ತು ಸನ್ನಿವೇಶದಲ್ಲಿ ಹೆಚ್ಚುವರಿ ಗಂಜಿ/ ಪುನರ್ವಸತಿ ಕೇಂದ್ರಗಳನ್ನು ತೆರೆಯುವಂತೆ ಸೂಚನೆ ನೀಡಲಾಗಿದೆ ಮೃತರ ಕುಟುಂಬದವರಿಗೆ 3 ಪ್ರಕರಣಗಳಲ್ಲಿ ತಲಾ ರೂ 50,000/–ದಂತೆ ಮತ್ತು ಒಂದು ಪ್ರಕರಣದಲ್ಲಿ ರೂ 1,00,000/– ದಂತೆ ಪರಿಹಾರ ನೀಡಲಾಗಿದೆ ಮನೆ ಹಾನಿಗೆ ಮತ್ತು ಬೆಳೆಹಾನಿಗೆ ಪರಿಹಾರ ಕೊಡಲು ಕ್ರಮ ಕೈಗೊಳ್ಳಲಾಗುತ್ತಿದೆ ಮೂಲಭೂತ ಸೌಕರ್ಯಗಳ ದುರಸ್ತಿಗಾಗಿ ಕ್ರಮವಹಿಸಲಾಗುತ್ತಿದೆ ಪರಿಹಾರ ಒದಗಿಸುವಂತೆ ಎಲ್ಲ ರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳಲಾಗಿದೆ

ಇ) ವಿವರ ಕೆಳಗಿನಂತಿರುತ್ತವೆ

ಕ್ರ ಸಂ	ಹಾನಿಗೊಳಗಾದ ಗ್ರಾಮ	ಸಂತಸ್ಥ ಕುಟುಂಬಗಳ	ಒಟ್ಟು ಸಂತಸ್ಥರ

		ಸಂಖ್ಯೆ	ಸಂಖ್ಯೆ
1	ಗುಹ್ಯ	19	66
2	ಕರಡಿಗೋಡು	24	62
3	ಹಾಲುಗುಂದ ಕೊಂಡಂಗೇರಿ	17	80
4	ಗೋಣಿಕೊಪ್ಪ	105	350
5	ಬೇತ್ರಿ	21	173
6	ಮಡಿಕೇರಿ ನಗರ	42	157
7	ನೆಲ್ಲಿ ಹುದಿಕೇರಿ	12	43
	ಒಟ್ಟು	**240**	**931**

ಈ) ಸರ್ಕಾರವು ಪರಿಹಾರ ಕಾರ್ಯ ಕೈಗೊಳ್ಳಲು ಕೊಡಗು ಜಿಲ್ಲೆಗೆ ರೂ 650 00 ಲಕ್ಷ ಬಿಡುಗಡೆ ಮಾಡಿದೆ

ಶ್ರೀ ಐವಾನ್ ನಿಗ್ಲಿ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಒಟ್ಟಿಗೆ ಮಳೆ ಹಾನಿ ಪರಿಹಾರವಾಗಿ ಕೊಡಗು ಜಿಲ್ಲೆಗೆ 650 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ ಈಗ ಬೆಳಿಗ್ಗೆ ಕೊಡಗು ಜಿಲ್ಲಾಡಳಿತದಿಂದ ನನಗೆ ಮಾಹಿತಿ ಸಿಕ್ಕಿರುವ ಪ್ರಕಾರ, ಸುಮಾರ ಕಡೆ ಲ್ಯಾಂಡ್ ಸ್ಲೈಡಿಂಗ್ ಆಗಿ, ಇಂದಿರಾ ನಗರದಲ್ಲಿ 30 ಮನೆಗಳು, ಜ್ಯೋತಿನಗರದಲ್ಲಿ 15 ಮನೆಗಳು, ಚಾಮುಂಡೇಶ್ವರಿಯಲ್ಲಿ 25 ಮನೆಗಳು, ಮಂಗಳದೇವಿನಗರದಲ್ಲಿ 85 ಮನೆಗಳು ಬಿದ್ದುಹೋಗಿವೆ, ಈ ಮನೆಗಳಿಗೆ ತಲಾ ರೂ 2000 ಪರಿಹಾರ ಕೊಟ್ಟಿದ್ದಾರೆ ಅವರಿಗೆ ಆ ಹಣದಲ್ಲಿ ಪುನಃ ಮನೆಯನ್ನು ಕಟ್ಟಗಾಗುತ್ತದೆಯೇ ? ಕನಿಷ್ಟ ಪ್ರತಿ ಮನೆಗೆ ರೂ 25,000 ಗಳನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ ಇತ್ತೀಚೆಗೆ ಕೊಡಗಿನಲ್ಲಿ ರೆಸಾರ್ಟ್‌ಗಳಿಗೆ ಅನುಮತಿಯನ್ನು ಕೊಟ್ಟಿದ್ದಾರೆ ನಾನು ಒಂದು ತಿಂಗಳ ಮುಂಚೆ ಹೋದಾಗ ಆ ಕಾಫಿ ಎಸ್ಟೇಟ್ ಎಲ್ಲಾ

ಉಪಾಧ್ಯಕ್ಷರು ನಿಮ್ಮ ಪ್ರಶ್ನೆ ಸೀಮಿತವಾಗಿರಲಿ, ಅಲ್ಲಿಗೆಲ್ಲಾ ಈಗ ಹೋಗಬೇಡಿ, ನಿಮ್ಮ ವಿಷಯವೇನೆಂಬುದನ್ನು ಸ್ಪಷ್ಟವಾಗಿ ಹೇಳಿ

ಶ್ರೀ ಐವಾನ್ ನಿಗ್ಲಿ · ಬಿದ್ದುಹೋಗಿರುವ ಈ 200 ಮನೆಗಳಿಗೆ ಕನಿಷ್ಟ ತಲಾ ರೂ 25,000 ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಸದಸ್ಯರಾದ ನಿಗ್ಲಿಯವರೇನು ಪ್ರಶ್ನೆ ಕೇಳಿದ್ದಾರೆ, ಅವರು ಪ್ರಸ್ತುತ ಪಡೆದುಕೊಂಡಿರುವ ಮಾಹಿತಿಯ ಪ್ರಕಾರ, ಇವತ್ತು ಎಲ್ಲೆಲ್ಲಿ ಪೂರ್ಣ ಮನೆಗಳು ಬಿದ್ದಿವೆ, ಅವಕ್ಕೆ ಹೆಚ್ಚಿನ ಪರಿಹಾರವನ್ನು

ಕೊಡುವುದಕ್ಕೆ ನಾನು ಜಿಲ್ಲಾಧಿಕಾರಿಗಳಿಗೆ ಸೂಚನೆಗಳನ್ನು ಕೊಟ್ಟಿದ್ದೇನೆ ಮತ್ತೆ ಕೇಂದ್ರ ಸರ್ಕಾರದ ಹೊಸ ಗೈಡ್ ಲೈನ್ಸ್ ಪ್ರಕಾರನೂ ಇವತ್ತು ಪೂರ್ಣವಾಗಿ ಮನೆಗಳು ಬಿದ್ದಂಥ ಸಂದರ್ಭದಲ್ಲಿ ಅದಕ್ಕೆ ಪರಿಹಾರಧನ ಕೊಡುವುದನ್ನು ಹೆಚ್ಚಿಗೆ ಮಾಡಿದ್ದಾರೆ ಅದೇರೀತಿ ಅರ್ಧಂಬರ್ಧ ಬಿದ್ದಂಥ ಮನೆಗಳಿಗೂ ಹೆಚ್ಚಿನ ಪರಿಹಾರ ಕೊಡಲು ಈಗಾಗಲೇ ಗೈಡ್ ಲೈನ್ಸ್ ಬಂದಿದೆ ಆ ಪ್ರಕಾರ ನಾವು ಹೆಚ್ಚಿನ ಪರಿಹಾರ ಕೊಡಲು ನಾವು ಸೂಚನೆಯನ್ನು ಕೊಡುತ್ತೇವೆ

ಶ್ರೀ ಎಂ ಟಿ ಬಿ ನಾಗರಾಜ್ . ಇವತ್ತು ನೀವು ಕೊಟ್ಟಿರುವ ರೂ 2000 ನಲ್ಲಿ ಅರ್ಧ ಬಿದ್ದು ಹೋಗಿರುವ ಮನೆಯನ್ನು ರಿಪೇರಿ ಮಾಡಿಕೊಳ್ಳುವುದಕ್ಕಾಗುವುದಿಲ್ಲ ಒಂದು ಮೂಟೆ ಸಿಮೆಂಟ್ ಬೆಲೆ ರೂ 300ಗಳು, ಒಬ್ಬ ಗಾರೆಯವರಿಗೆ 300 ರೂ ಕೂಲಿ, ಮನೆ ರಿಪೇರಿ ಮಾಡಿಕೊಳ್ಳುವುದಕ್ಕಾಗುವುದಿಲ್ಲ, ಅರ್ಧ ಮನೆ ಬಿದ್ದವರೆಗೆ ಕನಿಷ್ಟ ರೂ 10,000 ಕೊಡದಿದ್ದರೆ ಆ ಬಡವರಿಗೆ ಹೇಗೆ ಸಹಾಯ ಮಾಡಿದಂತಾಗುತ್ತದೆ ? ಸಂಪೂರ್ಣ ಮನೆ ಬಿದ್ದವರಿಗೆ ರೂ 25,000ಗಳನ್ನು ಕೊಡಿ

ಶ್ರೀ ಜಗದೀಶ್ ಶೆಟ್ಟರ್ ಸಂಪೂರ್ಣ ಮನೆಗಳು ಬಿದಿದ್ದರೆ ಹೊಸ ಗೈಡ್‌ಲೈನ್ಸ್ ಪ್ರಕಾರ ರೂ 25 000 ಗಳನ್ನು ಮತ್ತು ಅರ್ಧಂಬರ್ಧ ಬಿದ್ದ ಮನೆಗಳಿಗೆ ರೂ ಹತ್ತರಿಂದ ಹನ್ನೇರಡು ಸಾವಿರ ಕೊಡಲು ಅವಕಾಶವಿದೆ ಹೀಗಾಗಿ, ನಮ್ಮ ಅಧಿಕಾರಿಗಳಿಗೆ ಆ ರೀತಿಯ ಸೂಚನೆಗಳನ್ನು ಮತ್ತು ಅನುಮತಿಯನ್ನು ಕೊಟ್ಟಿದ್ದೇವೆ

ಶ್ರೀ ಕೆ ಅಭಯ ಚಂದ್ರ ಈಗಾಗಲೇ ರೂ 6000 ಕೊಟ್ಟವರಿಗೆ ಉಳಿದ 19,000 ಗಳನ್ನು ಕೊಡುತ್ತೀರಾ ? ಈಗ 2 ಸಾವಿರ 6 ಸಾವಿರ ಪರಿಹಾರ ಕೊಟ್ಟವರಿಗೆ ಹೊಸ ಗೈಡ್‌ಲೈನ್ಸ್ ಪ್ರಕಾರ ಉಳಿದ ಹಣವನ್ನು ಕೊಡಬೇಕಲ್ಲ

ಶ್ರೀ ಬಿ ಎ ಜೀವಿಜಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಕೊಡಗು ಜಿಲ್ಲೆಗೆ ಆರೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಕೊಟ್ಟಿದ್ದಾರೆ ಹಿಂದಿನ ಬಾಕಿ ಸೇರಿ ಆರೂವರೆ ಕೋಟಿ ಎಂದು ಹೇಳುತ್ತಾರೆ ನಮ್ಮ ಕೊಡಗು ಜಿಲ್ಲೆಯಲ್ಲಿ ಮಳೆಯಿಂದ ಹಾನಿಯಾಗಿರುವ ಸುಮಾರು 40 ಕೋಟಿ ರೂಪಾಯಿಗಳನ್ನು ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ, ಈಗ ಬಿಡುಗಡೆಯಾಗಿರುವುದು ಕೇವಲ 5 ಕೋಟಿ ರೂಪಾಯಿಗಳು ಮಾತ್ರ. ನಮ್ಮ ಕೊಡಗು ಜಿಲ್ಲೆಯಲ್ಲಿ ಬಹಳ ಮಳೆಯಾಗುತ್ತಿದೆ ನಿನ್ನೆ ನಾನು ಬರುತ್ತಿರುವಾಗ, ನೀವು ಒಂದೊಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮೈಸೂರು ಬಂಟ್ವಾಳ ರಸ್ತೆ ಮಾಡುತ್ತಿದ್ದೀರಿ ಈಗಾಗಲೇ ಅಲ್ಲಿ ಗುಂಡಿ ಬಿದ್ದಿದೆ, ನಮ್ಮ ಮಳೆಯ ಪ್ರಮಾಣ ಎಷ್ಟಿದೆ ಎಂದರೆ 6000–8000 ಮಿಲಿ ಮೀಟರ್ ಅಷ್ಟು ಮಳೆ ಬರುತ್ತಿದೆ, ನಮಗೆ ರಸ್ತೆಗಳಿಲ್ಲ ಅದಕ್ಕೋಸ್ಕರ ಈ ಮಳೆ ಹಾನಿಯಲ್ಲಾದರೂ ಹೆಚ್ಚಿನ ಆದ್ಯತೆಯನ್ನು ಕೊಟ್ಟು ನಮ್ಮ ಕೊಡಗು ಜಿಲ್ಲೆಯ ಈ

ರಸ್ತೆಗಳನ್ನು ರಿಪೇರಿ ಮಾಡಬೇಕು ಕೊಡಗು ಜಿಲ್ಲೆ ಮಾತ್ತವಲ್ಲ ತೀರ್ಥಹಳ್ಳಿ ಸೇರಿದಂತೆ ಮಲೆನಾಡು ಪ್ರದೇಶಕ್ಕೆ ಈ ಮಳೆ ಹಾನಿಯ ಹಿನ್ನೆಲೆಯಲ್ಲಿ ಹೆಚ್ಚಿನ ಹಣವನ್ನು ಕೊಡುತ್ತೀರಾ ಎನ್ನುವ ಪ್ರಶ್ನೆಯನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳಬಯಸುತ್ತೇನೆ

ಶ್ರೀ ಸಿ ಟಿ ರವಿ ಸಕಲೇಶಪುರ, ಅರಸೀಕೆರೆ ಮತ್ತು ಸೋಮವಾರ ಪೇಟೆ ಭಾಗಗಳಲ್ಲಿ ಯಾವುದೇ ಬೆಳೆ ಇಲ್ಲ, ಕಾಫಿ, ಮೆಣಸು ಒಂದು ಎಲೆಬಿಡದಂತೆ ಹಾಳಾಗಿ ಹೋಗಿದೆ

ಉಪ ಸಭಾಧ್ಯಕ್ಷರು ಈಗ ಇದನ್ನು ಅರ್ಧಗಂಟೆ ಚರ್ಚೆಗೆ ತೆಗೆದುಕೊಳ್ಳೋಣವೆ ?

ಶ್ರೀ ಸಿ ಟಿ ರವಿ ಅರ್ಧಗಂಟೆ ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ

ಉಪ ಸಭಾಧ್ಯಕ್ಷರು ಆಯಿತು ಬಿಡಿ

ಹೊಸ ತಾಲ್ಲೂಕುಗಳ ರಚನೆ

161 (1363) ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿ ಸರ್ಕಾರ ಹೊಸದಾಗಿ ತಾಲ್ಲೂಕುಗಳನ್ನು ರಚನೆ ಮಾಡಿದೆಯೇ,

ಆ) ಹಾಗಿದ್ದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸಲು ಕೈಗೊಂಡ ಕ್ರಮವೇನು,

ಇ) ರಾಜ್ಯದಲ್ಲಿ ಯಾವ ಯಾವ ಹೊಸ ತಾಲ್ಲೂಕುಗಳನ್ನು ರಚಿಸಲಾಗುವುದು,

ಈ) ಯಾವ ಕಾಲಮಿತಿಯೊಳಗೆ ಹೊಸದಾಗಿ ತಾಲ್ಲೂಕುಗಳನ್ನು ರಚಿಸಲಾಗುವುದು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 1956 ರಲ್ಲಿ ಹೊಸ ಮೈಸೂರು ರಾಜ್ಯ ನಿರ್ಮಾಣವಾದ ನಂತರ ಸಣ್ಣಪುಟ್ಟ ಬದಲಾವಣೆಗಳನ್ನು ಮಾತ್ರ ತಾಲ್ಲೂಕು ಮಟ್ಟದಲ್ಲಿ ಮಾಡಲಾಗಿದೆ ಆದರೆ, ಜಿಲ್ಲೆಗಳ ಪುನರ್ ವಿಂಗಡಣೆಯನ್ನು ಮೂರು ಸಲ ಮಾಡಲಾಗಿದೆ 1950 ರ ದಶಕದಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಗಳನ್ನು (Community Development Programs) ಜಾರಿಯಲ್ಲಿದ್ದಾಗಲೂ ಕೂಡ ಬೇರೆ ರಾಜ್ಯಗಳಲ್ಲಿ ತಾಲ್ಲೂಕುಗಳನ್ನು ವಿಭಜಿಸಿ ಅಭಿವೃದ್ಧಿ ಮಂಡಳಿಗಳನ್ನಾಗಿ (Development Block) ಮಾಡಲಾಗಿತ್ತು ಆದರೆ ಕರ್ನಾಟಕದಲ್ಲಿ ತಾಲ್ಲೂಕುಗಳನ್ನೆ Blockಗಳೆಂದು ಪರಿಗಣಿಸಲಾಯಿತು ಆಗಲೂ ಕೂಡ ತಾಲ್ಲೂಕುಗಳು ಪುನರ್